ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

CC No : 1028/2014

CW. 13 PW.8

**ಹೆಸರು** : ಶರತ್ ಕುಮಾರ್
ತಂದೆ/ಗಂಡ : ಲೇ. ನಂಜೇಗೌಡ
ವಯಸ್ಸು : 45 ವರ್ಷ
ಉದ್ಯೋಗ : ಪಿ.ಎಸ್.ಐ, ಸೆನ್ ಪೊಲೀಸ್ ಠಾಣೆ ಚಿಕ್ಕಬಳ್ಳಾಪುರ
ವಾಸ : ಚಿಕ್ಕಬಳ್ಳಾಪುರ

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿ:.30.11.2024

ನಾನು ನವೆಂಬರ್ 2010 ರಿಂದ ಆಗಸ್ಟ 2013 ರವರೆಗೆ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಯಲ್ಲಿ ಕ್ರೈಂ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:19.05.2013 ರಂದು ನಾನು ಮತ್ತು ಚಾಸಾ-5, 6 ಮತ್ತು ಪ್ರಾಸಾ -5 ರವರು ಗಸ್ತಿನಲ್ಲಿದ್ದಾಗ ಚನ್ನಪಟ್ಟಣ ಟೌನ್ ನಿಜಾಮಿ ಚೌಕ್ ಇಸ್ಲಾಂಪುರ ಅಲೀಮ್ ರವರ ಹಳೆಯ ಹೆಂಚಿನ ಮನೆಯ ಹೊರಾಂಗಣದಲ್ಲಿ ಗ್ರಾಹಕರಿಗೆ ವಿತರಣೆಯಾಗಬೇಕಾದ ನೀಲಿ ಸೀಮೆಎಣ್ಣೆಯನ್ನು ಅಕ್ರಮವಾಗಿ ದಾಸ್ತಾನು ಇರಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ಪಂಚರಾದ ಪ್ರಾಸಾ-1, 2 ಮತ್ತು ಚಾಸಾ-4 ರವರೊಂದಿಗೆ ಸ್ಥಳಕ್ಕೆ ದಾಳಿ ಮಾಡಿ ತಲಾ 200 ಲೀಟರ್ ಸಾಮರ್ಥ್ಯವಿರುವ 8 ತುಂಬಿರುವ ಕಬ್ಬಿಣದ ಬ್ಯಾರಲ್ ಗಳು ಹಾಗೂ ತಲಾ 25 ಲೀಟರ್ ಸಾಮರ್ಥ್ಯವಿರುವ 4 ಪ್ಲಾಸ್ಟಿಕ್ ಕ್ಯಾನ್‌ಗಳು ಒಟ್ಟು 1740 ಲೀಟರ್ ಸೀಮೆಎಣ್ಣೆಯನ್ನು ಅಮಾನತ್ತು ಪಡಿಸಿಕೊಂಡು ಪ್ರತಿಯೊಂದರಲ್ಲೂ 750 ಎಂ.ಎಲ್ ಅನ್ನು ರಾಸಾಯಾನಿಕ ವಿಶ್ಲೇಷಣೆಗೆ ಕಳುಹಿಸಿಕೊಡಲು ಪಂಚರ ಸಮಕ್ಷಮ ತೆಗೆದುಕೊಂಡಿರುತ್ತೇವೆ. ಸ್ಥಳದಲ್ಲಿ ದೊರೆತ ದಿಲೀಪ್ ಏಜೆನ್ಸಿಯ ಎರಡು ಬಿಲ್ ಗಳನ್ನು ವಶಪಡಿಸಿಕೊಂಡಿರುತ್ತೇವೆ. ಸದರಿ ಬಿಲ್ ಗಳನ್ನು ಈಗಾಗಲೇ ಮು.ಮಾ-2

ಮತ್ತು 3 ಎಂದು ಗುರುತಿಸಲಾಗಿದೆ. ನಿಪಿ.1 ಮಹಜರ್ ಅನ್ನು ಮಧ್ಯಾಹ್ನ 02.45 ರಿಂದ 04.45 ಗಂಟೆಯವರೆಗೆ ತಯಾರಿಸಲಾಯಿತು. ಸದರಿ ನಿಪಿ.1 ರಲ್ಲಿರುವ ಸಾಕ್ಷಿ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.1 ಸಿ ಎಂದು ಗುರುತಿಸಲಾಯಿತು. ನಂತರ ವರದಿಯನ್ನು ಮತ್ತು ಮಹಜರ್ ಅನ್ನು ಹಾಗೂ ದಾಸ್ತಾನುವನ್ನು ಚಾಸಾ-12 ರವರಿಗೆ ಮುಂದಿನ ಕ್ರಮಕ್ಕಾಗಿ ವರ್ಗಾಯಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ. ಹೆಚ್.ಕೆ. ವಕೀಲರಿಂದಃ</u>

ನಮಗೆ ಬಂದ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದಿಸಲಾಗಿದೆ. ಸೀಮೆಎಣ್ಣೆಯ ಬಗ್ಗೆ ಯಾವುದೇ ದೂರು ನೀಡಲು ಹಾಗೂ ಸದರಿ ದೂರಿನ ಆಧಾರದ ಮೇಲೆ ಕ್ರಮ ಜರುಗಿಸಲು ಬೇರೆ ಇಲಾಖೆ ಇದೆ ಎಂದರೆ ಸಾಕ್ಷಿ ನಮಗೂ ಅಧಿಕಾರ ಇದೆ ಎಂದು ನುಡಿಯುತ್ತಾರೆ, ನಾನು ಪಂಚರಿಗೆ ವಿಚಾರ ತಿಳಿಸಿದ್ದೇನೆ ಆದರೆ ಯಾವುದೇ ನೋಟೀಸು ನೀಡಿಲ್ಲ. ಠಾಣೆಯಿಂದ ಕೃತ್ಯ ನಡೆದ ಸ್ಥಳಕ್ಕೆ ಯಾವ ಮಾರ್ಗವಾಗಿ ಹೋದೆವು ಎಂದು ಈಗ ನನಗೆ ನೆನಪಿಲ್ಲ. ಮನೆಯ ಡೋರ್ ನಂಬರ್ ಅನ್ನು ನಿಪಿ.1 ಮಹಜರ್ ನಲ್ಲಿ ನಮೂದಿಸಿಲ್ಲ. ಸದರಿ ಮನೆ ಅಲೀಮ್ ರವರಿಗೆ ಸೇರಿದ್ದು ಎಂದು ತೋರಿಸಲು ಯಾವುದಾದರೂ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ನಾನು ತನಿಖಾಧಿಕಾರಿಯಲ್ಲ ಎಂದು ನುಡಿಯುತ್ತಾರೆ. ಕೃತ್ಯ ಸ್ಥಳಕ್ಕೆ ಹೋದ ತಕ್ಷಣ ಛಾಯಾಚಿತ್ರ ತೆಗೆಯಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಹಾಗೂ ಛಾಯಾಚಿತ್ರ ತೆಗೆದಿಲ್ಲ. ನೀವು ರಾಸಾಯಿನಿಕ ಪರೀಕ್ಷೆಗಾಗಿ ತೆಗೆದ ಮಾದರಿ ಬಾಟಲ್ ಗಳು ಈಗ ನ್ಯಾಯಾಲಯದ ಮುಂದೆ ಇಲ್ಲ. ಸದರಿ ಬಾಟಲ್ ಗಳಿಗೆ ಚೀಟಿಗಳನ್ನು ಅಂಟಿಸಿ ಸಹಿಯನ್ನು ಸಹ ಮಾಡಿದ್ದೇನೆ. ಮು.ಮಾ-2 ಮತ್ತು 3 ಗಳು ಜೆರಾಕ್ಸ್ ಪ್ರತಿಗಳು ಎಂದರೆ ಸರಿ. 2012-13 ರಲ್ಲಿ ಬಿಳಿ ಸೀಮೆಎಣ್ಣೆ ಮಾರುಕಟ್ಟೆಯಲ್ಲೂ ಸಹ ಮಾರಾಟ ಆಗುತ್ತಿತ್ತು ಎಂದರೆ ನಾವು ವಶಕ್ಕೆ ಪಡೆದಿರುವುದು ನೀಲಿ ಸೀಮೆಎಣ್ಣೆ.

ಆಹಾರ ಇಲಾಖೆ ಜೊತೆ ಸೇರಿಕೊಂಡು ನೀವು ತನಿಖೆ ಮಾಡಲು ನಿಮಗೆ ತೊಂದರೆ ಇತ್ತೇ ಎಂದರೆ ಸಾಕ್ಷಿ ನಮಗೆ ಮಾಹಿತಿ ಬಂದ ಮೇರೆಗೆ ನಾವು ತನಿಖೆ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಿಪಿ.1 ಮಹಜರ್ ಕ್ರಮ ಜರುಗಿಸಿದ ಸ್ಥಳದ ಚಕ್ಕುಬಂದಿ ನನಗೆ ನೋಡದೆ ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನೀವು ವಶಕ್ಕೆ ಪಡೆದ ಸೀಮೆಎಣ್ಣೆಯನ್ನು ಯಾವ ಮಾಪನದಲ್ಲಿ ಅಳತೆ ಮಾಡಿರುತ್ತೀರಾ ಎಂದರೆ ಸಾಕ್ಷಿ 200 ಲೀ ಬ್ಯಾರಲ್ ಗಳು ಮತ್ತು 25 ಲೀಟರ್ ನ ಕ್ಯಾನ್ ನ ತುಂಬಾ ಸೀಮೆಎಣ್ಣೆ ತುಂಬಿತ್ತು ಆದ ಕಾರಣ ನಾವು ಯಾವುದೇ ಅಳತೆ ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ ಹಾಗೂ ಯಾವುದೇ ಬ್ಯಾರಲ್ ಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಂತೆ ಸ್ಥಳದಲ್ಲಿ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಠಾಣೆಗೆ ಸೀಮೆಎಣ್ಣೆ ವಿತರಣೆ ಮಾಡಿಲ್ಲ ಎಂದು ಯಾವುದೇ ಡಿಪೋಗಳಿಂದ ದೂರು ಬಂದಿಲ್ಲ ಎಂದರೆ ಸರಿ. ಠಾಣಾ ಅಂಕಿ ಅಂಶಕ್ಕಾಗಿ ಮಾಲೀಕರಿಲ್ಲದ ದಾಸ್ತಾನು ಉಪಯೋಗಿಸಿಕೊಂಡು ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ಅನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇನೆ ಎಂದೆರ ಸರಿಯಲ್ಲ. ಹಿರಿಯ ಅಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.